# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸಾಧನೆ ಅಳೆಯಲು "ವಿಕೇಂದ್ರೀಕರಣ ಸೂಚ್ಯಾಂಕ ಹಾಗೂ ಅಳತೆಗೋಲಿನ ಸೂಚ್ಯಾಂಕಗಳ" (Devolution and Performance Index Report for PRIs in Karnataka) ಅಧ್ಯಯನ ಕೈಗೊಳ್ಳುವ ಸಂಬಂಧ CMDR, ಧಾರವಾಡ ಇವರಿಗೆ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಕರಾರು ಒಪ್ಪಂದದ ದಿನಾಂಕ: 28-01-2021.
2. ನಿರ್ದೇಶಕರು, CMDR, ಧಾರವಾಡ ಇವರ ಪತ್ರ ಸಂಖ್ಯೆ:CMDRD/34/2021, ದಿನಾಂಕ:29-01-2021.

ಪ್ರಸ್ತಾವನೆ:

ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸಾಧನೆ ಅಳೆಯಲು "ವಿಕೇಂದ್ರೀಕರಣ ಸೂಚ್ಯಾಂಕ ಹಾಗೂ ಅಳತೆಗೋಲಿನ ಸೂಚ್ಯಾಂಕಗಳ" (Devolution and Performance Index Report for PRIs in Karnataka) ಅಧ್ಯಯನ ಕೈಗೊಳ್ಳಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ Centre for Multi-Disciplinary Development Research (CMDR), Dharwad ಸಂಸ್ಥೆಯೊಂದಿಗೆ ಕರಾರು ಒಪ್ಪಂದ (Memorandum of Understanding) ಮಾಡಿಕೊಳ್ಳುವ ಸಂಬಂಧ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ದಿನಾಂಕ:06-01-2021ರಂದು ಜರುಗಿದ ಸಭೆಯಲ್ಲಿನ ನಿರ್ಣಯದಂತೆ ಮೇಲೆ ಓದಲಾದ (1)ರನ್ವಯ ದಿನಾಂಕ:28-01-2021 ರಿಂದ ಕರಾರು ಒಪ್ಪಂದವನ್ನು ಮಾಡಲಾಗಿರುತ್ತದೆ. ಸದರಿ ಕರಾರು ಒಪ್ಪಂದದ ಕಂಡಿಕೆ 6(a)ರನ್ವಯ ಕಾರ್ಯ ಯೋಜನೆಯ ಒಟ್ಟು ಮೊತ್ತದ ಮೇಲೆ ಶೇ.40ರಷ್ಟು ಅನುದಾನವನ್ನು ಮೊದಲನೇ ಕಂತಾಗಿ ಬಿಡುಗಡೆ ಮಾಡಬೇಕಾಗಿರುತ್ತದೆ.

ನಿರ್ದೇಶಕರು, CMDR, ಧಾರವಾಡ ಇವರು ಮೇಲೆ ಓದಲಾದ (2)ರ ದಿನಾಂಕ:29-01-2021ರ ಪತ್ರದಲ್ಲಿ ಕರಾರು ಒಪ್ಪಂದದ ಪ್ರಕಾರ ಮೊದಲನೇ ಕಂತು ರೂ.15,42,200/-ಗಳನ್ನು ಈ ಕೆಳಕಂಡ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

| ಬ್ಯಾಂಕಿನ ಹೆಸರು | ಶಾಖೆ | ಖಾತೆ ಸಂಖ್ಯೆ | IFSC ಕೋಡ್ |
|---|---|---|---|
| ಕೆನರಾ ಬ್ಯಾಂಕ್ | MAIN BRANCH, SOMESHWARA HEIGHTS COMMERCIAL COMPLEX, NEAR OLD DSP OFFICE, P.B.ROAD, DHARWAD-560 008. | 0509101048973 | CNRB0000509 |

ಅದರಂತೆ, ಕರಾರು ಒಪ್ಪಂದದ ಕಂಡಿಕೆ 6(a)ರನ್ವಯ ಕಾರ್ಯ ಯೋಜನೆಯ ಒಟ್ಟು ಮೊತ್ತ ರೂ.38,55,500/-ಗಳ ಪೈಕಿ ಶೇ.40ರಷ್ಟು ಮೊದಲನೇ ಕಂತಿನ ಅನುದಾನ ರೂ.15,42,200/-ಗಳಲ್ಲಿ, ಶೇಕಡ 10ರಷ್ಟು TDS ಅನ್ನು ಕಟಾಯಿಸಿ ರೂ.13,87,980/- ( ಹದಿಮೂರು ಲಕ್ಷದ ಎಂಬತ್ತೇಳು ಸಾವಿರದ ಒಂಬೈನೂರ ಎಂಬತ್ತು ರೂಪಾಯಿಗಳು ಮಾತ್ರ) ಗಳನ್ನು ಲೆಕ್ಕಶೀರ್ಷಿಕೆ:2515-00-101-0-09-103ರಡಿ CMDR, ಧಾರವಾಡ ಇವರಿಗೆ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ. ಅದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 16 ಜಿಪಸ 2021, ಬೆಂಗಳೂರು, ದಿನಾಂಕ:08-02-2021**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸಾಧನೆ ಅಳೆಯಲು "ವಿಕೇಂದ್ರೀಕರಣ ಸೂಚ್ಯಾಂಕ ಹಾಗೂ ಅಳತೆಗೋಲಿನ ಸೂಚ್ಯಾಂಕಗಳ" (Devolution and Performance Index Report for PRIs in Karnataka) ಅಧ್ಯಯನ ಕೈಗೊಳ್ಳಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ Centre for Multi-Disciplinary Development Research (CMDR), Dharwad ಸಂಸ್ಥೆಯೊಂದಿಗೆ ಮಾಡಲಾದ ಕರಾರು ಒಪ್ಪಂದದ (Memorandum of Understanding) ಕಂಡಿಕೆ 6(a)ರನ್ವಯ ಕಾರ್ಯ ಯೋಜನೆಯ ಒಟ್ಟು ಮೊತ್ತ ರೂ.38,55,500/-ಗಳ ಪೈಕಿ ಶೇ.40ರಷ್ಟು ಮೊದಲನೇ ಕಂತಿನ ಅನುದಾನ ರೂ.15,42,200/-ಗಳಲ್ಲಿ, ಶೇಕಡ 10ರಷ್ಟು ಟಿ.ಡಿ.ಎಸ್ ರೂ.1,54,220/-ಗಳನ್ನು ಕಟಾಯಿಸಿ ರೂ.13,87,980/- (ಹದಿಮೂರು ಲಕ್ಷದ ಎಂಬತ್ತೇಳು ಸಾವಿರದ ಒಂಬೈನೂರ ಎಂಬತ್ತು ರೂಪಾಯಿಗಳು ಮಾತ್ರ) ಗಳನ್ನು ಲೆಕ್ಕಶೀರ್ಷಿಕೆ:2515-00-101-0-09-103ರಡಿ CMDR, ಧಾರವಾಡ ಇವರಿಗೆ ಬಿಡುಗಡೆಗೊಳಿಸಿ ಆದೇಶಿಸಿದೆ.

ಸದರಿ ಅನುದಾನವನ್ನು Centre for Multi-Disciplinary Development Research (CMDR), Dharwad, ಇದರ ಉಳಿತಾಯ ಖಾತೆ ಸಂಖ್ಯೆ: 0509101048973 (ಕೆನರಾ ಬ್ಯಾಂಕ್, ಮೇನ್ ಬ್ರಾಂಚ್, ಸೋಮೇಶ್ವರ ಹೈಟ್ಸ್, ಕಮರ್ಷಿಯಲ್ ಕಾಂಪ್ಲೆಕ್ಸ್, ಪಿ.ಬಿ ರಸ್ತೆ, ಧಾರವಾಡ, IFSC Code: CNRB0000509, Branch code-000509ಗೆ ಖಜಾನೆ-2 ಮೂಲಕ ಜಮೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯವರಿಗೆ ಅನುದಾನದ ಬಿಲ್ಲಿನ ಮೇಲೆ ರುಜು ಮಾಡಿ ಸೆಳೆಯಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 08/02/21
(ಬಿ.ನವೀನ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.

2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ (ಪಿ.ಬಿ.ನಂ.5329) ಬೆಂಗಳೂರು.
4. ನಿರ್ದೇಶಕರು, Centre for Multi-Disciplinary Development Research (CMDR), ಡಾ. ಬಿ.ಆರ್. ಅಂಬೇಡ್ಕರ್ ನಗರ, ಯಾಲಕ್ಕಿ ಶೆಟ್ಟರ್ ಕಾಲೋನಿ ಹತ್ತಿರ, ಧಾರವಾಡ-580 004.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು/ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು.
7. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಇವರ ಆಪ್ತ ಸಹಾಯಕರು, ಕೆ. ಜಿ. ರಸ್ತೆ, ಬೆಂಗಳೂರು.
4. ನಿರ್ದೇಶಕರು(ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಇವರ ಆಪ್ತ ಸಹಾಯಕರು.